# ಅಲೆಮಾರಿ ಬದುಕಿನಲ್ಲಿ ಯಾವುದು ಸ್ಥಿರ?



**ಹರ್ಷ ಬಿ.ಎಸ್.**
**ಕಲರ್ಸ್ ಕನ್ನಡ ‘ಯಜಮಾನ’ದ ರಾಘವೇಂದ್ರ**

◆ **ರಾಘು ಯೋಚನೆ ಏಕೆ ಸ್ಥಿರವಾಗಿ ನಿಲ್ಲುವುದಿಲ್ಲ?**

ಈ ರೀತಿಯ ಕ್ಯಾರೆಕ್ಟರ್ ಸಾಮಾನ್ಯವಾಗಿ ಕಾಣಿಸುತ್ತವೆ. ಅಲ್ಲಲ್ಲಿ ಇಂತಹ ಕುಟುಂಬಗಳನ್ನೂ ನೋಡಬಹುದು. ಮಲತಾಯಿಯ ತಾರತಮ್ಯ ಧೋರಣೆಯನ್ನು ಅನೇಕರು ಎದುರಿಸುತ್ತಿರಬಹುದು. ತಾಯಿ ಮತ್ತು ಹೆಂಡತಿಯರ ನಡುವಿನ ಸಂಘರ್ಷ ಸಂಭಾಳಿಸುವುದು ಕಷ್ಟ. ಪ್ರೀತಿಯನ್ನು ಯಾರಿಗೆ ತೋರಿಸುವುದು ಎನ್ನುವ ಬೇಸರ, ಗೊಂದಲ ಕಾಡುತ್ತದೆ. ತನ್ನ ನೋವಿಗೆ ಸ್ಪಂದಿಸುವ ತರುಣ ಒಳ್ಳೆಯ ಗೆಳೆಯ. ಆತ ಅತ್ಯುತ್ತಮ ಸಲಹೆಗಳನ್ನು ನೀಡುತ್ತಿರುತ್ತಾನೆ. ರಾಘುಗೆ ಪರಿಸ್ಥಿತಿ ಅರ್ಥ ಆದರೂ ಆ ಸಂದರ್ಭವನ್ನು ಎದುರಿಸಲು ಹಿಂದೇಟು ಹಾಕುತ್ತಾನೆ. ಗೆಳೆಯನ ಸಲಹೆಯಿಂದ ಬದಲಾಗುತ್ತಾನೆ. ರಾಘು ಇನ್ನು ಮುಂದೆ ಬೇರೆ ರೂಪದಲ್ಲಿ ಕಾಣಿಸುತ್ತಾನೆ. ಪೋಷಕರಷ್ಟೇ ಹೆಂಡತಿ ಜಾನ್ವಿಗೂ ಮನ್ನಣೆ ನೀಡುತ್ತಾನೆ. ವೈಯಕ್ತಿಕವಾಗಿ ಹೇಳುವುದಾದರೆ ಒಳ್ಳೆಯ ಪಾತ್ರ. ಇಂತಹ ಪಾತ್ರ ಎಲ್ಲ ಕಲಾವಿದರಿಗೂ ಸಿಗಬೇಕು ಎಂದು ಬಯಸುತ್ತೇನೆ. ಆರಂಭದಲ್ಲಿ ತಂಗಳು ತಿಂದು ಬದುಕುತ್ತಿದ್ದ ರಾಘು. ಡೆಲಿವರಿ ಬಾಯ್ ಕೆಲಸ ಮಾಡುತ್ತ ಸಾಕಷ್ಟು ಬದಲಾವಣೆಯ ಜೊತೆ ಬೆಳೆದಿದ್ದಾನೆ.

◆ **ನಟನೆಯನ್ನೇ ಆಯ್ಕೆ ಮಾಡಿಕೊಂಡಿದ್ದು ಏಕೆ?**

ತುಮಕೂರು ಹತ್ತಿರದ ಬಾಣಾವರ ನಮ್ಮೂರು. ಕೃಷಿ ಕುಟುಂಬ, ತೆಂಗು, ಅಡಿಕೆ, ತರಕಾರಿ ಬೆಳೆಯುತ್ತೇವೆ. ತಂದೆ ರಂಗಭೂಮಿ ಆಸಕ್ತರು. ‘ಗ್ರಾಮೀಣ ಕ್ರಿಯಾತ್ಮಕ ರಂಗ ತಂಡ’ದಲ್ಲಿ ಕ್ರಿಯಾಶೀಲರಾಗಿದ್ದರು. ಕುಟುಂಬದ ವಾತಾವರಣದಿಂದಲೇ ನಾಟಕದ ಪರಿಚಯ ಆಯಿತು. ಅಭಿನಯಿಸಲು ಅವಕಾಶಗಳು ಸಿಕ್ಕವು. ನಟನಾಗಬೇಕು ಎನ್ನುವ ಉದ್ದೇಶ ಇಲ್ಲದೇ ಇದ್ದರೂ ರಜೆಯ ದಿನಗಳಲ್ಲಿ ಕುತೂಹಲದಿಂದ ರಂಗದ ಮೇಲೆ ಪ್ರವೇಶ ಮಾಡಿದೆ. ಕ್ರಮೇಣ ಇದರಲ್ಲಿ ಏನೋ ಇದೆ ಎನ್ನುವುದನ್ನು ಮನಗಂಡೆ. ಯಾವ ಕೆಲಸದಲ್ಲಿಯೂ ಸಿಗದ ತೃಪ್ತಿ ಅಭಿನಯದಲ್ಲಿ ಅನುಭವಿಸಿದೆ. ಬೇರೆ ಕೆಲಸವನ್ನು ಮಾಡಲು ಇಷ್ಟ ಬರಲಿಲ್ಲ. ಏಕರೂಪದ ಕೆಲಸದ ಏಕತಾನತೆಯಿಂದ ತಪ್ಪಿಸಿಕೊಳ್ಳುವುದಕ್ಕೆ ಇದೇ ಒಳ್ಳೆಯ ಮಾರ್ಗ ಎಂದು ಅನ್ನಿಸಿತು. ಒಮ್ಮೆ ರಾಜ, ಮತ್ತೊಮ್ಮೆ ಮಂತ್ರಿ, ಮಗದೊಮ್ಮೆ ತನಿಖಾಧಿಕಾರಿಯಾದೆ. ಇದೆಲ್ಲ ಕಿಕ್ ಕೊಟ್ಟವು. ಬೇರೆ ಪಾತ್ರದಲ್ಲಿ ಜೀವಿಸುವುದು ಸುಖ ಅನ್ನಿಸಿತು.

◆ **ತೆರೆಯ ಪ್ರವೇಶ ಹೇಗಾಯಿತು? ಅದರ ಪರಿಶ್ರಮವನ್ನು ನೆನಪಿಸಬಹುದಾ?**

ನಟನೆಯ ಕನಸು ಕಾಣುತ್ತಿದ್ದ ನಾನು ‘ನೀನಾಸಂ’ ಹೆಸರು ಕೇಳಿದ್ದೆ. ಬೇಸಿಗೆ ಶಿಬಿರಕ್ಕೆ ಹಾಜರಾದೆ. ಅಲ್ಲಿಯೂ ಒಂದು ನಾಟಕ ಮಾಡಿದೆ. ಹೀಗಿದ್ದವನಿಗೆ ಟೀವಿ–ಸಿನಿಮಾಕ್ಕೆ ಬರುವ ಯೋಚನೆ ಇರಲಿಲ್ಲ. ರಂಗತಂಡ ಕಟ್ಟಬೇಕು ಎಂದು ಕನಸು ಕಂಡಿದ್ದೆ. ಹಿತೈಷಿಗಳ ಒತ್ತಾಯದಿಂದ ಬೆಳ್ಳಿತೆರೆಯನ್ನು ಅರಸಿ ಬೆಂಗಳೂರಿಗೆ ಬಂದೆ. ಏನು ಮಾಡಬೇಕು ಎನ್ನುವುದು ಗೊತ್ತಿರಲಿಲ್ಲ. ಅವರಿವರನ್ನು ಕೇಳಿಕೊಂಡು ಸಿನಿಮಾ ನಿರ್ಮಾಣ ಸಂಸ್ಥೆಗೆ ಬಂದು ಸೇರಿದೆ. ನಿರ್ದೇಶಕ ತಂಡದಲ್ಲಿ ಕೆಲಸ ಮಾಡುತ್ತಾ ಪಾತ್ರಕ್ಕಾಗಿ ಕಾಯುತ್ತಿದ್ದೆ. ಟೀವಿ ಆಗಲೇ ಇಷ್ಟ ಇದ್ದರೂ ನಿರ್ಮಾಪಕರನ್ನು ಹಿಡಿಯುವುದು ಗೊತ್ತಿರಲಿಲ್ಲ. ಸಿನಿಮಾ ವಲಯ ಸುಲಭವಾಗಿ ಸಿಕ್ಕಿತು. ಎರಡು ಮೂರು ವರ್ಷ ಸುತ್ತಾಡುವಷ್ಟರಲ್ಲಿ ಕೋವಿಡ್ ಬಂತು. ಊರು ಸೇರಿದವನಿಗೆ ಮತ್ತೆ ಬೆಂಗಳೂರಿಗೆ ಬರಲು ಭಯ ಅನ್ನಿಸಿತು. ಆದರೂ ಬಂದೆ, ಯಾವ ಸಿನಿಮಾಗಳು ಸಿಗಲಿಲ್ಲ. ಟೀವಿನೇ ಉತ್ತಮ ಎಂದು ಡಬ್ಬಿಂಗ್ ಆರ್ಟಿಸ್ಟ್ ಆಗಿ ಕೆಲಸವನ್ನು ಶುರುಮಾಡಿದೆ.

ನೇರವಾಗಿ ತಂಡವನ್ನು ಪರಿಚಯ ಮಾಡಿಕೊಳ್ಳುವುದು ಕಷ್ಟ ಎಂದು ಡಬ್ಬಿಂಗ್ ಆರ್ಟಿಸ್ಟ್ ಆಗಿದ್ದು. ಒಮ್ಮೆ ಧರಣೇಶ್ ನಿರ್ದೇಶನದ ಒಂದು ಧಾರಾವಾಹಿಗೆ ಆಡಿಷನ್ ನೀಡಿದೆ. ಕೊನೆಯ ಸುತ್ತಿನಲ್ಲಿ ಪಾತ್ರ ಕೈ ತಪ್ಪಿತು. ಮರಳುವಾಗ ‘ಯಾವುದಾದರೂ ಪಾತ್ರ ನನಗೆ ಸೂಕ್ತ ಆಗುವುದಿದ್ದರೆ ನನ್ನನ್ನು ನೆನಪಿಸಿಕೊಳ್ಳಿ’ ಎಂದು ವಿನಂತಿಸಿ ಬಂದಿದ್ದೆ. ಅದಾಗಿ ವರ್ಷವೇ ಉರುಳಿದ್ದವು. ರಾಮ್‌ಜೀ ಪ್ರೊಡಕ್ಷನ್‌ನಿಂದ ಕರೆ ಬಂತು. ಊರಲ್ಲಿದ್ದವನಿಗೆ ಮೂರು ನಾಲ್ಕು ಕರೆ ಬಂದರೂ ಮನೆ ಬಿಟ್ಟುಬರುವ ಮನಸು ಮಾಡಲಿಲ್ಲ. ಪೋಷಕರ ಒತ್ತಾಯದಿಂದ ಮತ್ತೆ ಬೆಂಗಳೂರಿಗೆ ಬಂದೆ. ಸ್ಕ್ರೀನ್ ಟೆಸ್ಟ್ ಮಾಡಿದರು, ಪಾತ್ರಕ್ಕೆ ಒಪ್ಪಿಗೆ ಸೂಚಿಸಿದರು. ಧರಣೇಶ್ ಅವರೇ ಈ ಸಂಸ್ಥೆಗೆ ಪ್ರೊಫೈಲ್ ಕಳಿಸಿದ್ದು ಗೊತ್ತಾಯಿತು. ಎಂದೂ ಅವರಿಗೆ ಸಂಪರ್ಕ ಮಾಡದಿದ್ದರೂ ನೆನಪಿಟ್ಟು ಪ್ರೋತ್ಸಾಹಿಸಿದ್ದರು. ಅದನ್ನು ಅವರ ಬಳಿ ಕೇಳಿದೆ ಕೂಡ. ಆಗವರು ‘ಬಂದಾಗ ನೀವು ಹೇಗೆ ಇರುತ್ತೀರಿ, ನಿಮ್ಮ ವರ್ತನೆ ಅಷ್ಟೇ ಮುಖ್ಯ. ಅದು ಎಷ್ಟೇ ವರ್ಷವಾದರೂ ನೆನಪಿರುತ್ತೆ ಅಂದರು’ ಒಟ್ಟಾರೆ ಹೋರಾಟದಿಂದಲೇ ತೆರೆಯ ಮೇಲೆ ಕಾಣಿಸಿಕೊಳ್ಳಲು ಆರಂಭಿಸಿ ಒಂದು ವರ್ಷ ಆಯಿತು. ಈ ವಿಷಯದಲ್ಲಿ ಪೋಷಕರು ತುಂಬ ಖುಷಿಯಲ್ಲಿ ಇದ್ದಾರೆ.

◆ **ತಾಂತ್ರಿಕ ಸಾಧ್ಯತೆಗಳ ಬಗ್ಗೆ ಏನು ಯೋಚನೆ ಮಾಡಿದ್ದೀರಿ?**

ತಾಂತ್ರಿಕವಾಗಿ ಕೆಲಸ ಮಾಡುವ ಆಸಕ್ತಿ ಇದೆ. ಈಗ ಕಲಾವಿದನಾಗಿದ್ದೇನೆ. ಇಲ್ಲಿ ಏನೇ ಮಾಡಿದರೂ ಖುಷಿ ಇದೆ. ನಿರ್ದೇಶನ ಮಾಡುವ ಆಸೆ ಇದೆ. ಸಮಯಕ್ಕಾಗಿ ಕಾದು ನೋಡಬೇಕು ಎಂದುಕೊಂಡಿದ್ದೇನೆ. ಕಲಾವಿದರಿಗೆ ಒಂದೇ ನೆಲೆ ಇರುವುದಿಲ್ಲ. ಅಲೆಮಾರಿ ಜೀವನ. ಆ ಪ್ರವಾಹದಲ್ಲಿ ತೇಲಬೇಕು. ಮುಂದೆ ಬೇರೆ ಬೇರೆ ಭಾಷೆಗಳಲ್ಲಿ ನಟಿಸಬಹುದು. ಏಕತಾನತೆ ಪಾತ್ರಗಳ ನಿರ್ವಹಣೆಯೂ ಇಷ್ಟ ಇಲ್ಲ. ವಾಣಿಜ್ಯ ಸಿನಿಮಾ, ಕಲಾತ್ಮಕ ಸಿನಿಮಾದಲ್ಲಿಯೂ ಮಾಡಬಹುದು. ಒಂದು ಸಿನಿಮಾ ನೋಡುವಾಗಲೂ ನಾಯಕನ ಮುಖ ನೋಡಿ ಸಿನಿಮಾ ಆಯ್ಕೆ ಮಾಡಿಕೊಳ್ಳುವುದಿಲ್ಲ. ಅಂತೆಯೇ ಸಿನಿಮಾ ಮಾಡುವ ಸಂದರ್ಭದಲ್ಲಿಯೂ ಕಥೆಯೇ ನನಗೆ ಮುಖ್ಯ. ಒಳ್ಳೆಯ ಸಿನಿಮಾ ನೋಡಲು ಇಷ್ಟಪಡುವಂತೆ ಒಳ್ಳೆಯ ಸಿನಿಮಾದಲ್ಲಿ ಅಭಿನಯಿಸಲು ಬಯಸುತ್ತೇನೆ. ತೆರೆಯ ಹಿಂದೆ ಕೂಡ ಕೆಲಸ ಮಾಡುವ ಆಸಕ್ತಿ ಇದೆ. ಎಲ್ಲದನ್ನೂ ಸಮಯ ನಿರ್ಧರಿಸುತ್ತದೆ.

■ **ರಾಘವೇಂದ್ರ ಕೆ.**